ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
ಆಡಳಿತ ವಿಭಾಗ registrarrur@gmail.com

ಕ್ರ. ಸಂ. ಆಶ್ರೀಮವಿರಾ/ಆಡಳಿತ/2026-27/684 ದಿನಾಂಕ:

ವಿಷಯ : ದಿನಾಂಕ 07.08.2026 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಕಳುಹಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 07.08.2026 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,
ರಾಯಚೂರು

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

ಇವರಿಗೆ :

01. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560001.
02. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು-560001.
03. ವಿಶ್ವವಿದ್ಯಾನಿಲಯದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
04. ಆಯುಕ್ತರ/ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ.
05. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಪ್ಯಾಲೆಸ್ ರಸ್ತೆ, ಬೆಂಗಳೂರು-560001.
06. ನಿರ್ದೇಶಕರು, ವೈದ್ಯಕೀಯ ಕಾಲೇಜು ಶಿಕ್ಷಣ, ಬೆಂಗಳೂರು-560001.
07. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-560001
08. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು -560001.
09. ಕುಲಸಚಿವರು(ಮೌಲ್ಯಮಾಪನ), ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
10. ಹಣಕಾಸು ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
11. ಮುಖ್ಯಸ್ಥರು/ಸಂಯೋಜಕರು ಎಲ್ಲಾ ಅಧ್ಯಯನ ವಿಭಾಗಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು.
12. ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
13. ಉಪ ಕುಲಸಚಿವರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
14. ನಿರ್ದೇಶಕರು, ಕಾ.ಅ.ಮಂ., ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
15. ಗ್ರಂಥಪಾಲಕರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
16. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
17. ಸಂಯೋಜಕರು, ಕ್ರೀಡಾ ವಿಭಾಗ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
18. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
19. ಕಛೇರಿ ಪ್ರತಿ.

ದಿನಾಂಕ 07.08.2026 ರಂದು ಶುಕ್ರವಾರ ಬೆಳಗ್ಗೆ 11:00 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿರುವ ಸಿಂಡಿಕೇಟ್ ಸಭಾಂಗಣ ದಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

**<u>ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು</u>**

1) ಡಾ. ಶಿವಾನಂದ ಕೆಳಗಿನಮನಿ, ಗೌರವಾನ್ವಿತ ಕುಲಪತಿಗಳು – ಅಧ್ಯಕ್ಷರು
2) ಡಾ. ಲತಾ ಎಂ.ಎಸ್., ಡೀನರು: ಕಲಾ ನಿಕಾಯ – ಸದಸ್ಯರು
3) ಡಾ. ನಾಗರತ್ನ ಎಂ. ನಾಯ್ಕ್ – ಸದಸ್ಯರು (ಆನ್‌ಲೈನ್)
4) ಶ್ರೀ ಶ್ರೇಯಾಂಕ್ ಹೆಚ್. ವಿ. – ಸದಸ್ಯರು
5) ಡಾ. ಮೀನಾಕ್ಷಿ ಖಂಡಿಮಠ – ಸದಸ್ಯರು
6) ಶ್ರೀ ಡಿ.ಆರ್. ಚಿನ್ನ – ಸದಸ್ಯರು
7) ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ – ಸದಸ್ಯರು
8) ಶ್ರೀ ಶಿವಣ್ಣ ವಕೀಲರು – ಸದಸ್ಯರು
9) ಶ್ರೀ ಚಂದ್ರಶೇಖರ ಲಿಂಗದಳ್ಳಿ – ಸದಸ್ಯರು
10) ಪ್ರೊ. ಪಾರ್ವತಿ ಸಿ.ಎಸ್., ಡೀನರು: ಶಿಕ್ಷಣ ನಿಕಾಯ (ಪ್ರಭಾರ) – ಸದಸ್ಯರು
11) ಡಾ. ಸುಯಮೀಂದ್ರ ಕುಲಕರ್ಣೀ, ಹಣಕಾಸು ಅಧಿಕಾರಿಗಳು – ವಿಶೇಷ ಆಹ್ವಾನಿತರು
12) ಪ್ರೊ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
13) ಡಾ. ಚನ್ನಪ್ಪ ಎ., ಕೆ.ಎ.ಎಸ್. (ಸೀನಿಯರ್ ಸೂಪರ್ ಟೈಂ ಸ್ಕೇಲ್) – ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಜರಿದ್ದ ಎಲ್ಲಾ ಸಿಂಡಿಕೇಟ್ ಸದಸ್ಯರನ್ನು ಸ್ವಾಗತಿಸುತ್ತಾ ಸಭೆಯನ್ನು ನಡೆಸಲು ಕುಲಸಚಿವರಿಗೆ ವಹಿಸಿದರು. ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಸದಸ್ಯರ ಕೋರಂ ಖಚಿತಪಡಿಸಿಕೊಳ್ಳುವ ಮೂಲಕ ಕಾರ್ಯಸೂಚಿಯ ಪ್ರಕಾರ ಸಭೆಯ ಮುಂದೆ ವಿಷಯಗಳನ್ನು ಮಂಡಿಸಿದರು.

**ವಿಷಯ ಕ್ರಮಾಂಕ (1)**

ದಿನಾಂಕ 15.04.2026ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿ ಕುರಿತು.

ದಿನಾಂಕ 15.04.2026 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ಎಲ್ಲಾ ಚರ್ಚಿತ ವಿಷಯಗಳ ಕುರಿತು ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಕುಲಸಚಿವರು ಸಭೆಯ ಮುಂದೆ ಮಂಡಿಸಿದರು.

**ನಿರ್ಣಯ: ಸಭೆಯು ಅನುಮೋದಿಸಿತು.**

**ವಿಷಯಕ್ರಮಾಂಕ (02)**

ದಿನಾಂಕ 21.05.2026 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವಕುರಿತು.

**ಚರ್ಚೆ ಮತ್ತು ನಿರ್ಣಯ**

(ಅ) ದಿನಾಂಕ 21.05.2026ರ ಸಿಂಡಿಕೇಟ್ ಸಭೆಯ ವಿಷಯ ಕ್ರಮಾಂಕ (1) ರ ನಿರ್ಣಯಲ್ಲಿ ಪ್ರಯಾಣ ಭತ್ಯೆ ರೂ.4500/–ಕ್ಕೆ ನಿಗದಿಪಡಿಸಿರುವುದನ್ನು ಶ್ರೀ. ಶ್ರೇಯಾಂಕ್ ಅವರು ಆಕ್ಷೇಪಣೆ ವ್ಯಕ್ತಪಡಿಸಿದರು. ಈ ವಿಷಯದ ಕುರಿತು ಸಭೆಯಲ್ಲಿ ಚರ್ಚಿಸಿ ಸರ್ಕಾರವು ನೇಮಕಮಾಡಿದ ಸಿಂಡಿಕೇಟ್ ಸದಸ್ಯರ ಆದೇಶದಲ್ಲಿನ ವಿಳಾಸದ ದೂರಕ್ಕೆ (ಕಿ.ಮೀ.) ಅನುಗುಣವಾಗಿ ಅವರ ಪ್ರಯಾಣ ಭತ್ಯೆಯನ್ನು ಪಾವತಿಸುವಂತೆ ತಿದ್ದುಪಡಿ ಮಾಡಿ ದಿನಾಂಕ 07.08.2026 ರ ಸಿಂಡಿಕೇಟ್ ಸಭೆಯಿಂದ ಅನ್ವಯವಾಗುವಂತೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

(ಬ) ದಿನಾಂಕ 21.05.2026ರ ಸಿಂಡಿಕೇಟ್ ಸಭೆಯ ವಿಷಯ ಕ್ರಮಾಂಕ (2)ರಲ್ಲಿ ಗೌರವ ಡಾಕ್ಟರೇಟ್ ಪದವಿಯ ಕುರಿತು ಸಭೆಯಲ್ಲಿ ಚರ್ಚಿಸಲಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣನೀಯ ಸಂಖ್ಯೆಯ ಪ್ರತಿಭಾವಂತರು ಇರುವುದರಿಂದ ಹಾಗೂ ವಿಶ್ವವಿದ್ಯಾಲಯದ ವಾರ್ಷಿಕ ಘಟಿಕೋತ್ಸವವು ತುಂಬಾ ತಡವಾಗಿ ಆಯೋಜಿಸಲಾಗುತ್ತಿರುವುದರಿಂದ 'ಗೌರವಡಾಕ್ಟರೇಟ್' ಪದವಿಯನ್ನು 03 ರ ಬದಲಾಗಿ ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳನ್ನು ನಾಮನಿರ್ದೇಶನ ಮಾಡಲು ಎಲ್ಲಾ ಸಿಂಡಿಕೇಟ್ ಸದಸ್ಯರು ಶಿಫಾರಸ್ಸು ಮಾಡಿದರು. ಮಾನ್ಯ ಕುಲಪತಿಗಳು 03 ರ ಬದಲಾಗಿ 05 'ಗೌರವಡಾಕ್ಟರೇಟ್' ಪದವಿಯನ್ನು ಪ್ರದಾನ ಮಾಡಲು ಪ್ರಸ್ತಾಪಿಸಿದರು. ಇದಕ್ಕೆ ಶ್ರೀಮತಿ ಮೀನಾಕ್ಷಿ ಖಂಡೀಮಠ, ಶ್ರೀ ಜೀಶಾನ್ ಇವರು ಸೇರಿದಂತೆ ಎಲ್ಲಾ ಸದಸ್ಯರು ಒಪ್ಪಿಗೆ ಸೂಚಿಸಿದರು. ಇದೇ ಸಂದರ್ಭದಲ್ಲಿ ಕುಲಸಚಿವರು (ಮೌಲ್ಯಮಾಪನ) ಇವರು ಘನತೆವೆತ್ತ ಕುಲಾಧಿಪತಿಗಳಿಂದ ರಚಿಸಲಾದ 'ಗೌರವ ಡಾಕ್ಟರೇಟ್ ಶೋಧನಾ ಸಮಿತಿ' ಯ ಮುಂದೆ ಕನಿಷ್ಠ 45 ದಿನಗಳ ಮುಂಚೆಯೇ ಅಭ್ಯರ್ಥಿಗಳನ್ನು ನಾಮನಿರ್ದೇಶಿಸುವಂತೆ ತಿಳಿಸಿದರು.

(ಕ) ದಿನಾಂಕ 21.05.2026ರ ಸಿಂಡಿಕೇಟ್ ಸಭೆಯ ವಿಷಯ ಕ್ರಮಾಂಕ (2)ರಲ್ಲಿ ಚರ್ಚಿಸಿ ರಚಿಸಲಾದ 'ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಉಪಸಮಿತಿ' ಯಲ್ಲಿ ಶ್ರೀಮತಿ ಮೀನಾಕ್ಷಿ ಖಂಡೀಮಠ ಇವರನ್ನು ಇನ್ನೊಬ್ಬ ಸದಸ್ಯರನ್ನಾಗಿ ಸೇರಿಸಿ ತಿದ್ದುಪಡಿ ಮಾಡಲು ಸಭೆಯು ತೀರ್ಮಾನಿಸಿತು.

ಉಳಿದಂತೆ ದಿನಾಂಕ 21.05.2026 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ಸಭೆಯು ಯಾವುದೇ ತಿದ್ದುಪಡಿ ಇಲ್ಲದೇ ಸರ್ವಾನುಮತದಿಂದ ದೃಢೀಕರಿಸಿತು.

**ವಿಷಯಕ್ರಮಾಂಕ (03)**

ಶ್ರೀ ಸಂತೋಷ ಬಿ., ಸಹಾಯಕ ಕುಲಸಚಿವರು ಇವರ ಪತ್ರದ ಕುರಿತು.

**ನಿರ್ಣಯ**

ಶ್ರೀ ಸಂತೋಷ ಬಿ., ಸಹಾಯಕ ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರ ಮನವಿ ಪತ್ರದ ಕುರಿತು ಸಭೆಯಲ್ಲಿ ಚರ್ಚಿಸಲಾಗಿ ಸದರಿಯವರು ತಮ್ಮ ಪ್ರಸ್ತುತ ಹುದ್ದೆಯ ಸಮೇತ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಗೊಂಡಲ್ಲಿ ಅನುಮತಿಸಬಹುದು ಎಂದು ಸಿಂಡಿಕೇಟ್ ಸಭೆಯು ನಿರ್ಧರಿಸಿತು.

**ವಿಷಯಕ್ರಮಾಂಕ (04)**

ಡಾ. ಶಾಂತಾದೇವಿ ಟಿ., ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಇವರ ಪತ್ರದ ಕುರಿತು.

**ನಿರ್ಣಯ**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಸರ್ಕಾರದಿಂದ ಪ್ರಸ್ತುತ ಪ್ರಾಧ್ಯಾಪಕ ಹುದ್ದೆ ಸೃಜನೆಯಾಗಿರದೇ ಇರುವುದರಿಂದ ಮತ್ತು ಡಾ. ಶಾಂತಾದೇವಿ ಟಿ., ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಇವರು ತಮ್ಮ ಪ್ರಸ್ತುತ ಹುದ್ದೆಯ ಸಮೇತ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಗೊಂಡಲ್ಲಿ ನಿರಾಕ್ಷೇಪಣಾ ಪತ್ರ ನೀಡಲು ಸಭೆಯು ನಿರ್ಧರಿಸಿತು.

**ವಿಷಯಕ್ರಮಾಂಕ (05)**

ವಿಶ್ವವಿದ್ಯಾನಿಲಯ External Examination ಖಾತೆ UBI ಕುರಿತು ಸೂಕ್ತ ನಿರ್ಧಾರ ಕೈಗೊಳ್ಳುವ ಕುರಿತು.

**ಚರ್ಚೆ**

ಸದರಿ ವಿಷಯವಾಗಿ ಕುಲಸಚಿವರು ಮಾತನಾಡುತ್ತಾ ಹಿಂದೆ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಇಲ್ಲಿ ತೆರೆಯಲಾದ ಎಕ್ಸಟರ್ನಲ್ ಎಕ್ಸಾಮಿನೇಷನ್ ಖಾತೆಯು ಕಳೆದ 03 ವರ್ಷಗಳಿಂದ ನಾನ್ ಆಪರೇಷನಲ್ ಅಕೌಂಟ್ ಆಗಿದೆ ಎಂದು ಸದರಿ ಬ್ಯಾಂಕ್ ನಿಂದ ಪತ್ರ ಸ್ವೀಕೃತವಾದ ಹಿನ್ನೆಲೆಯಲ್ಲಿ ಸದರಿ ಅಕೌಂಟ್ ಅನ್ನು ರೀಯಾಕ್ಟಿವೇಟ್ ಮತ್ತು ಇಕೆವೈಸಿ ಮಾಡಿಸುವುದು ಅವಶ್ಯಕವಾಗಿರುತ್ತದೆ ಇಲ್ಲವಾದಲ್ಲಿ ಖಾತೆಯು ನಾನ್ ಆಪರೇಟಿವ್ ಆಗುವ ಮುಖಾಂತರ ಅದರಲ್ಲಿದ್ದ ಹಣವು ಆರ್‌ಬಿಐಗೆ ಜಮಾ ಆಗುವ ಸಾಧ್ಯತೆ ಇರುತ್ತದೆ ಎಂದು ಸಭೆಗೆ ತಿಳಿಸಿದರು.

**ನಿರ್ಣಯ**

ಇದರ ಸಾಧಕ ಬಾಧಕಗಳ ಕುರಿತು ಚರ್ಚಿಸಲಾಗಿ ಸದರಿ ಖಾತೆಯನ್ನು ರೀಯಾಕ್ಟಿವೇಟ್ ಮಾಡಿಸಲು ಹಣಕಾಸು ವಿಭಾಗದಿಂದ ಸೂಕ್ತ ಕ್ರಮವಹಿಸುವಂತೆ ಹಾಗೂ ಸದರಿ ವಿಷಯಕ್ಕೆ ರಚಿಸಲಾದ ತನಿಖಾ ಸಮಿತಿಯ ವರದಿ ಸಲ್ಲಿಕೆಯಾಗುವವರೆಗೆ ಸದರಿ ಖಾತೆಯಲ್ಲಿ ಯಾವುದೇ ವಹಿವಾಟು ಮಾಡುವುದು ಬೇಡ ಎಂದು ಸಭೆಯು ನಿರ್ಧರಿಸಿತು.

**ವಿಷಯಕ್ರಮಾಂಕ (06)**

ಸಿಟಿ ವಿಶ್ವವಿದ್ಯಾಲಯ (UAE) ಮತ್ತು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ನಡುವೆ ಶೈಕ್ಷಣಿಕ ಚಟುವಟಿಕೆಗಳ ಒಡಂಬಡಿಕೆ ಮಾಡುವ ಕುರಿತು.

**ಚರ್ಚೆ**

ಈ ವಿಷಯದ ಕುರಿತು ಮಾನ್ಯ ಕುಲಪತಿಗಳು ಸಭೆಗೆ ವಿವರಿಸಿದರು. ಈ ಎರಡು ವಿಶ್ವವಿದ್ಯಾಲಯಗಳ ಶೈಕ್ಷಣಿಕ ಹಾಗೂ ಸಂಶೋಧನಾ ಕಾರ್ಯಕ್ರಮಗಳಿಗೆ ವಿದ್ಯಾರ್ಥಿ ಹಾಗೂ ಬೋಧಕರ ಪರಸ್ಪರ ವಿನಿಮಯ ಸಂದರ್ಭದಲ್ಲಿ ತಗುಲುವ ಪ್ರಯಾಣ ವೆಚ್ಚವನ್ನು ಆಯಾ ವಿದ್ಯಾರ್ಥಿ/ಬೋಧಕ ಸಿಬ್ಬಂದಿಗಳಿಂದ ಭರಿಸಲಾಗುವುದು ಮತ್ತು ಸ್ಥಳೀಯ ವಸತಿ, ಆಹಾರ ಹಾಗೂ ಸಾರಿಗೆಯ ವೆಚ್ಚವನ್ನು ಆತಿಥೇಯ ವಿಶ್ವವಿದ್ಯಾಲಯದಿಂದ ಭರಿಸಲಾಗುವುದು ಎಂದು ತಿಳಿಸಿದರು.

**ನಿರ್ಣಯ**

ಸಿಟಿ ವಿಶ್ವವಿದ್ಯಾಲಯ (UAE) ಮತ್ತು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು ನಡುವೆ ಶೈಕ್ಷಣಿಕ ಚಟುವಟಿಕೆಗಳ ಒಡಂಬಡಿಕೆಯನ್ನು ಚರ್ಚಿಸಿದಂತೆ ಸಭೆಯು ಅನುಮೋದಿಸಿತು.

**ವಿಷಯಕ್ರಮಾಂಕ (07)**

ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವ ಮಾಡುವ ಕುರಿತು.

**ಚರ್ಚೆ**

ಈ ವಿಷಯವಾಗಿ ಮಾನ್ಯ ಕುಲಪತಿಗಳು ಸಹ್ಯಾದ್ರಿ ಉತ್ಸವದ ಹಾಗೆ ನಮ್ಮ ವಿಶ್ವವಿದ್ಯಾಲಯವು ಎಡೆದೊರೆ ಉತ್ಸವ ಎಂಬ ಶೀರ್ಷಿಕೆಯಲ್ಲಿ ವಿಶ್ವವಿದ್ಯಾಲಯದ ಅಡಿಯ ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವವನ್ನು ಆಯೋಜಿಸುವಂತೆ ಸೂಚಿಸಿದರು. ಕುಲಸಚಿವರು (ಮೌಲ್ಯಮಾಪನ) ಇವರು Association of Indian Universities (AIU) ನ ಪ್ರಕಟಿಸುವ ವಾರ್ಷಿಕ ಕಾರ್ಯಕ್ರಮಗಳ ಪಟ್ಟಿ (Calendar of Events) ಯಂತೆ ಹಾಗೂ ವಿಶ್ವವಿದ್ಯಾಲಯದ ವಾರ್ಷಿಕ ಕಾರ್ಯಕ್ರಮಗಳ ಪಟ್ಟಿಯನ್ನು ತುಲನೆ ಮಾಡಿ ಯುವಜನೋತ್ಸವದ ದಿನಾಂಕವನ್ನು ನಿಗದಿಮಾಡಲು ಮಾನ್ಯ ಕುಲಪತಿಗಳ ವಿವೇಚನೆಗೆ ವಹಿಸಲು ಚರ್ಚಿಸಲಾಯಿತು. ಸದಸ್ಯರಾದ ಶ್ರೀ ಜೀಶಾನ್ ಇವರು ಈಗಾಗಲೇ ನಿಗದಿಪಡಿಸಿದ ಸ್ಥಳದಲ್ಲಿಯೇ ಸದರಿ ಕಾರ್ಯಕ್ರಮವನ್ನು ಆಯೋಜಿಸುವಂತೆ ಸಭೆಗೆ ಕೋರಿದರು.

**ನಿರ್ಣಯ**

ಯುವಜನೋತ್ಸವವನ್ನು ಪೂರ್ವನಿಗದಿತ ಸ್ಥಳದಲ್ಲಿಯೇ ಆಯೋಜಿಸಲು ಮತ್ತು ದಿನಾಂಕವನ್ನು ನಿಗದಿಮಾಡಲು ಮಾನ್ಯ ಕುಲಪತಿಗಳ ವಿವೇಚನೆಗೆ ವಹಿಸಿ ಸಭೆಯು ಅನುಮೋದಿಸಿತು.

**ವಿಷಯಕ್ರಮಾಂಕ (08)**

ಪ್ರಸಾರಂಗದ ಬೈಲಾ ಅನುಮೋದನೆಕುರಿತು.

**ಚರ್ಚೆ**

ಈ ವಿಷಯದ ಕುರಿತು ಕುಲಸಚಿವರು ವಿಶ್ವವಿದ್ಯಾಲಯದಿಂದ ಪ್ರಕಟಗೊಳ್ಳುವ ಪುಸ್ತಕ, ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪಠ್ಯಕ್ರಮ, ಪ್ರಚಾರೋಪನ್ಯಾಸ ಮಾಲೆ ಹಾಗೂ ಇತರೆ ಪ್ರಕಟನೆಗಳನ್ನು ಪ್ರಸಾರಂಗದ ಮೂಲಕ ಹೊರ ತರಬೇಕಾಗಿರುತ್ತದೆ. ಕಾರಣ, ಪ್ರಸಾರಂಗದ ಬೈಲಾಗಳನ್ನು (Bylaws) ರಚಿಸಬೇಕಾಗಿರುತ್ತದೆ ಎಂದು ತಿಳಿಸಿದರು ಮತ್ತು ಕರಡು ಬೈಲಾಗಳನ್ನು ಸಭೆಯಲ್ಲಿ ಮಂಡಿಸಿದರು.

**ನಿರ್ಣಯ**

ಸದರಿ ಬೈಲಾಗಳನ್ನು ವಿಶ್ವವಿದ್ಯಾನಿಲಯದ ಕ್ರಮನಿಯಮಾವಳಿ ಉಪಸಮಿತಿಯ ಪರಿಶೀಲನೆಗೆ ಒಳಪಟ್ಟು ಅನುಮೋದಿಸಬಹುದು ಎಂದು ಸಭೆಯು ನಿರ್ಧರಿಸಿತು.

**ವಿಷಯಕ್ರಮಾಂಕ (9)**

ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ ಚರ್ಚೆ

9.1) ವಿಶ್ವವಿದ್ಯಾನಿಲಯದ ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು ಪಟ್ಟಿ.

a) SC/ST ಮಹಿಳಾ ಹಾಸ್ಟಲ್ ಹಿಂಭಾಗದಲ್ಲಿತಡೆಗೋಡೆ (Compound Wall) ನಿರ್ಮಿಸುವಕಾಮಗಾರಿ ಅಂದಾಜು ವೆಚ್ಚ ರೂ. 50.00 ಲಕ್ಷ ಕುರಿತು.

b) ಭೌತಶಾಸ್ತ್ರ ಅಧ್ಯಯನ ವಿಭಾಗಗಕ್ಕೆ ವಿದ್ಯುನ್ಮಾನ ಉಪಕರಣಗಳ ಖರೀದಿ ಕುರಿತು ಅಂದಾಜು ವೆಚ್ಚ ರೂ. 50.00 ಲಕ್ಷ.

c) ಶೈಕ್ಷಣಿಕ ವಿಭಾಗದ ಮೇಲ್ಚಾವಣಿಯ ಸಿವಿಲ್ ಕಾಮಗಾರಿ ಹಾಗೂ ಎಲೆಕ್ಟ್ರಿಕಲ್ ಕಾಮಗಾರಿಯಕುರಿತು.

**ನಿರ್ಣಯ**

ಈ ವಿಷಯದ ಕುರಿತು ಚರ್ಚಿಸಲಾಗಿ ಉಪಕ್ರಮಾಂಕ (a) ಮತ್ತು (c)ಯ ಕಾಮಗಾರಿಗಳ ಅಂದಾಜು ಪಟ್ಟಿ ಮತ್ತು ವಿಸ್ತೃತ ಯೋಜನಾ ವರದಿಯನ್ನು ವಿಶ್ವವಿದ್ಯಾನಿಲಯದ 'ಕಟ್ಟಡ ಮತ್ತು ಕಾಮಗಾರಿ ಉಪಸಮಿತಿ'ಯ ಮುಂದೆ ಹಾಗೂ ಉಪ ಕ್ರಮಾಂಕ (b) ಕಾಮಗಾರಿಯ ಅಂದಾಜು ಪಟ್ಟಿ ಮತ್ತು ವಿಸ್ತೃತ ಯೋಜನಾ ವರದಿಯನ್ನು ವಿಶ್ವವಿದ್ಯಾನಿಲಯದ 'ಬೃಹತ್ ಖರೀದಿ ಉಪಸಮಿತಿ' ಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲು ಸಿಂಡಿಕೇಟ್ ಸಭೆಯು ನಿರ್ಧರಿಸಿತು.

**ವಿಷಯಕ್ರಮಾಂಕ (9.2)**

ಗುತ್ತಿಗೆ/ಹೊರಗುತ್ತಿಗೆ/ದಿನಗೂಲಿ ನೌಕರರಿಗೆ ಕಾರ್ಮಿಕ ಕಲ್ಯಾಣ ಇಲಾಖೆಯಿಂದ ಹೊರಡಿಸಿದ ದಿನಾಂಕ 22.05.2026ರ ಪರಿಷ್ಕರಿಸಿದ ದರಗಳನ್ನು ವಿಶ್ವವಿದ್ಯಾನಿಲಯದಿಂದ ಪಾವತಿಸುವ ಕುರಿತು.

**ಚರ್ಚೆ:**

ಕುಲಸಚಿವರು ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ/ಹೊರಗುತ್ತಿಗೆ/ದಿನಗೂಲಿ ನೌಕರರ ವೇತನವನ್ನು ಕಾರ್ಮಿಕ ಕಲ್ಯಾಣ ಇಲಾಖೆಯಿಂದ ಹೊರಡಿಸಿದ ದಿನಾಂಕ 22.05.2026ರ ಆದೇಶದಂತೆ ಪರಿಷ್ಕರಿಸುವ ಪ್ರಸ್ತಾವನೆಯನ್ನು ಸಭೆಯ ಮುಂದೆ ಮಂಡಿಸಿದರು. ಶ್ರೀ. ಚಂದ್ರಶೇಖರ್ ಲಿಂಗದಳ್ಳಿ ಇವರು, ಹೊರಗುತ್ತಿಗೆ ಸಿಬ್ಬಂದಿಗಳನ್ನು ಒಂದು ವೇಳೆ ಒಂದು ವರ್ಷಕ್ಕಿಂತ ಹೆಚ್ಚು ಅವಧಿಗೆ ಮುಂದುವರೆಸಿದರೆ, ಅವರ ವೇತನವನ್ನು ವಿಶ್ವವಿದ್ಯಾಲಯದ ಸಂಬಂಧಿಸಿದ ಅಧಿಕಾರಿಗಳಿಂದ ಭರಿಸಬೇಕಾಗುವುದು ಎಂದರು. ದುಬಾರಿ ಜೀವನ ಶೈಲಿ ಮತ್ತು ವಾರ್ಷಿಕ ಹಣ ದುಬ್ಬರವನ್ನು ಗಣನೆಗೆ ತೆಗೆದುಕೊಂಡು ವೇತನ ಪರಿಷ್ಕರಿಸುವಂತೆ ಹಾಗೂ ಒಳ್ಳೆಯ ಕೆಲಸಗಾರರನ್ನು ಗುರುತಿಸಿ, ಉಳಿಸಿಕೊಳ್ಳುವುದು, ವಿಶ್ವವಿದ್ಯಾಲಯದ ಘನತೆ, ಗೌಪ್ಯತೆ, ಶಿಸ್ತು ಮತ್ತು ಕಾರ್ಯಕ್ಷಮತೆ ಹೆಚ್ಚಿಸುವಂತೆ ಸಿಬ್ಬಂದಿಗಳಿಂದ ಕಚೇರಿ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ಶ್ರೀ ಜೀಶಾನ್ ಹಾಗೂ ಶ್ರೀ ಶ್ರೇಯಾಂಕ್ ಇವರು ಸೂಚಿಸಿದರು. ಶ್ರೀ ಡಿ. ಆರ್. ಚಿನ್ನ ಇವರು ಸದರಿ ಪರಿಷ್ಕರಣೆಯಿಂದ ವಿಶ್ವವಿದ್ಯಾಲಯಕ್ಕೆ ಎಷ್ಟು ಹೆಚ್ಚುವರಿ ಹಣಕಾಸಿನ ಹೊರೆಯಾಗಲಿದೆ ಎಂದು ಕೇಳಿದಾಗ ಹಣಕಾಸು ಅಧಿಕಾರಿಗಳು ಅಂದಾಜು ರೂ. 7.5 ಲಕ್ಷ ಹೆಚ್ಚುವರಿ ಮಾಸಿಕ/ವಾರ್ಷಿಕ ವೆಚ್ಚವಾಗಲಿದೆ ಎಂದರು. ಸದರಿ ವಿಷಯವನ್ನು ಉಪಸಮಿತಿಯಲ್ಲಿ ಮಂಡಿಸಿ, ಹಣಕಾಸು ಸಮಿತಿ ಅನುಮೋದನೆ ಪಡೆಯಬಹುದು ಎಂದರು. ಕುಲಸಚಿವರು ಸಿಬ್ಬಂದಿಗಳ ವೇತನ, ವಿದ್ಯುತ್, ದೂರಸಂಪರ್ಕ, ದಿನಪತ್ರಿಕೆ, ನೀರು ಇತ್ಯಾದಿ ಮೂಲಭೂತ ಸೌಕರ್ಯಗಳು ಕಡ್ಡಾಯ ವೆಚ್ಚಗಳಾಗಿದ್ದು ನಿಯಮಾನುಸಾರ ಪರಿಷ್ಕರಿಸಬಹುದು ಎಂದು ಸಭೆಗೆ ಸೂಚಿಸಿದರು.

**ನಿರ್ಣಯ**

ಕುಲಪತಿಗಳ ಒಪ್ಪಿಗೆ ಮೇರೆಗೆ ಸಭೆಯು ಸರ್ಕಾರದ ಪರಿಷ್ಕೃತ ಆದೇಶದಂತೆ ಗುತ್ತಿಗೆ/ಹೊರಗುತ್ತಿಗೆ/ದಿನಗೂಲಿ ಸಿಬ್ಬಂದಿಗಳ ವೇತನವನ್ನು 2026–27ನೇ ಆರ್ಥಿಕ ಸಾಲಿನ ಅಂದಾಜು ಆಯವ್ಯಯದಲ್ಲಿ ಹೆಚ್ಚುವರಿ ವೆಚ್ಚವನ್ನಾಗಿ ಸೇರಿಸುವ ಷರತ್ತಿಗೆ ಒಳಪಟ್ಟು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯಕ್ರಮಾಂಕ (9.3)**

ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿರುವತಾತ್ಕಾಲಿಕ UUCMS Technical Officers and UUCMS Coordinators ನೌಕರರನ್ನು ಮುಂದುವರೆಸುವ ಕುರಿತು.

**ಚರ್ಚೆ**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಯುಯುಸಿಎಮ್ಎಸ್ ಘಟಕ, ಇಪ್ರೊಕ್ಯೂರ್‌ಮೆಂಟ್, ಪರೀಕ್ಷೆ, ಹಣಕಾಸು ಹಾಗೂ ಇಂಜಿನಿಯರಿಂಗ್ ವಿಭಾಗಗಳಲ್ಲಿ ಪ್ರಸ್ತುತ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಅಧಿಕಾರಿಗಳು/ ಸಂಯೋಜಕರು/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಇವರ ವಿವರ ಈ ಕೆಳಗಿನಂತಿರುತ್ತದೆ. ದಿನಾಂಕ 11.09.2025 ರ ಸಿಂಡಿಕೇಟ್ ಸಭೆಯ, ವಿಷಯ ಕ್ರಮಾಂಕ 19 ರ ನಿರ್ಣಯದಲ್ಲಿ ಇವರ ಸೇವೆಯನ್ನು 11 ತಿಂಗಳವರೆಗೆ ಮುಂದುವರೆಸಲಾಗಿರುತ್ತದೆ.

| Sr. No. | Name | Temporary Appointment | Period of Appointment (11 Months) | Remarks |
|---|---|---|---|---|
| 1 | Dr.Bhagyajyothi | UUCMS Technical Officer | 04.10.2025 to 03.09.2026 | - |
| 2 | Dr. Immanuel J. | UUCMS Technical Officer | 04.10.2025 to 03.09.2026 | - |
| 3 | Dr.ShrimanthSudheer | UUCMS Technical Officer | 04.10.2025 to 03.09.2026 | - |
| 4 | Dr. Laxmikant Ramakrishna | eProcurement Officer | 04.10.2025 to 03.09.2026 | - |
| 5 | Smr. RekhaPatil | UUCMS Technical Coordinator | 04.10.2025 to 03.09.2026 | - |
| 6 | Dr.Sapna Shukla | UUCMS Technical Coordinator | 04.10.2025 to 03.09.2026 | - |
| 7 | Mr.Sagar Kulkarni | UUCMS Technical Coordinator | 04.10.2025 to 03.09.2026 | - |
| 8 | Mr.VrushabhendraPatil | UUCMS Technical Coordinator | 04.10.2025 to 03.09.2026 | - |
| 9 | Mrs.ReetuJewargi | Technical Coordinator | 04.10.2025 to 03.09.2026 | On Maternity Leave |
| 10 | Smt. Vijaylaxmi R C | Accountant | 04.10.2025 to 03.09.2026 | - |
| 11 | Mr.Gurushant | UUCMS Coordinator | 04.10.2025 to 03.09.2026 | - |
| 12 | Mr.Pampapathi B. | AEE | 04.10.2025 to 03.09.2026 | - |

ಇವರ 11 ತಿಂಗಳ ಅವಧಿಯು ದಿನಾಂಕ 03.09.2026 ರಂದು ಮುಕ್ತಾಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸದರಿಯವರ ಸೇವೆಯನ್ನು ಮುಂದುವರೆಸುವ ಹಾಗೂ ವೇತನ ಪರಿಷ್ಕರಣೆಯ ಕುರಿತು ಚರ್ಚಿಸುವ ಸಂದರ್ಭದಲ್ಲಿ ಸದರಿ ಅಧಿಕಾರಿ/ಸಂಯೋಜಕರ ವಿರುದ್ಧ ಕೆಲವೊಂದು ದೂರುಗಳು ಸ್ವೀಕೃತವಾಗಿವೆ ಎಂದು ಶ್ರೀ ಶ್ರೇಯಾಂಕ್ ಇವರು ಸಭೆಗೆ ತಿಳಿಸಿದರು. ಅವುಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಶ್ರೀ ಡಿ. ಆರ್. ಚೆನ್ನ, ಶ್ರೀ ಶ್ರೇಯಾಂಕ, ಶ್ರೀಮತಿ ಮೀನಾಕ್ಷಿ ಖಂಡೀಮಠ, ಶ್ರೀ ಶಿವಣ್ಣ, ಶ್ರೀ. ಚಂದ್ರಶೇಖರ್ ಲಿಂಗದಳ್ಳಿ, ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಹಾಗೂ ಶ್ರೀಮತಿ. ನಾಗರತ್ನ ನಾಯ್ಕ್ ಈ 06 ಸದಸ್ಯರನ್ನೊಳಗೊಂಡ ಉಪಸಮಿತಿಯನ್ನು ರಚಿಸಲು ಚರ್ಚಿಸಲಾಯಿತು.

**ನಿರ್ಣಯ**

ದಿನಾಂಕ 14.08.2026 ರಂದು ಸದರಿ ಉಪಸಮಿತಿ ಸಭೆಯನ್ನು ಕರೆದು ಚರ್ಚಿಸಿದ ನಂತರ ಮುಂದುವರೆಸಲು ತೀರ್ಮಾನಿಸಲಾಯಿತು.

**ವಿಷಯಕ್ರಮಾಂಕ (9.4)**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ 2026–27ನೇ ಸಾಲಿನ ಕ್ರೀಡಾಕೂಟಗಳನ್ನು ಆಯೋಜಿಸುವ ಕುರಿತು.

**ನಿರ್ಣಯ**

ವಿಶ್ವವಿದ್ಯಾಲಯದ ಕ್ರೀಡಾಸಮಿತಿಯಲ್ಲಿ ಚರ್ಚಿಸುವ ಷರತ್ತಿಗೊಳಪಟ್ಟು ಸಭೆಯು ಅನುಮೋದಿಸಿತು.

**ವಿಷಯಕ್ರಮಾಂಕ (9.5)**

ವಾಹನ ಚಾಲಕರಿಗೆ ವಿಶೇಷ ಭತ್ಯೆ ನೀಡುವಕುರಿತು.

**ಚರ್ಚೆ**

ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳ ವಾಹನ ಚಾಲಕರು ನಿರಂತರ ಚಾಲನಾ ಕರ್ತವ್ಯದಲ್ಲಿ ಇರುವುದರಿಂದ ಹಾಗೂ ಕೆಲವೊಂದು ತುರ್ತು ಸಂದರ್ಭದಲ್ಲಿ ಸತತವಾಗಿ ದೂರ ಪ್ರಮಾಣ ಮಾಡುವುದು ಅನಿವಾರ್ಯವಾಗಿರುವುದರಿಂದ ಅವರ ಮೇಲೆ ಮಾನಸಿಕ ಹಾಗೂ ದೈಹಿಕ ಒತ್ತಡ ಉಂಟಾಗುವ ಸಾಧ್ಯತೆ ಇರುತ್ತದೆ. ಇದರ ಪರಿಣಾಮ ಅವರ ಕುಟುಂಬದ ಮೇಲೆ ಆಗುವುದರಿಂದ ಕುಲಪತಿಗಳ ಹಾಗೂ ಕುಲಸಚಿವರ ವಾಹನ ಚಾಲಕರ ಹಿತದೃಷ್ಟಿಯಿಂದ ಇದರ ನಷ್ಟ ಸರಿದೂಗಿಸಲು ವಿಶೇಷ ಭತ್ಯೆ ನೀಡುವುದರ ಅಗತ್ಯತೆ ಕುರಿತು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

**ನಿರ್ಣಯ**

ಈ ವಿಷಯದ ಕುರಿತು ಚರ್ಚಿಸಲಾಗಿ ವಾಹನ ಚಾಲಕರಿಗೆ ವಿಶೇಷ ಭತ್ಯೆ ನೀಡುವ ನಿರ್ಧಾರವನ್ನು ಮಾನ್ಯ ಕುಲಪತಿಗಳ ವಿವೇಚನೆಗೆ ಬಿಡಲು ಸಭೆಯು ನಿರ್ಧರಿಸಿತು.

**ವಿಷಯಕ್ರಮಾಂಕ (9.6)**

ಗೌರವ ಡಾಕ್ಟರೇಟ್ ಪದವಿ ಪ್ರಧಾನದ ಪ್ರಸ್ತಾವನೆಗಳನ್ನು ಸಮಿತಿಗೆ ಸಲ್ಲಿಸುವ ಕುರಿತು.

**ನಿರ್ಣಯ**

ಉಪಸಮಿತಿಗೆ ವಹಿಸಲು ಅನುಮೋದಿಸಲಾಯಿತು.

**ವಿಷಯಕ್ರಮಾಂಕ (9.7)**

ವಿಶ್ವವಿದ್ಯಾನಿಲಯದ ಸ್ಟೇಡಿಯಂಗೆ ಮಣ್ಣು ಸವಕಳಿಯಾಗದಂತೆ ತಡೆಗೋಡೆ ನಿರ್ಮಿಸುವ ಕುರಿತು.

**ನಿರ್ಣಯ**

ಸಭೆಯಲ್ಲಿ ಈ ಕಾಮಗಾರಿಯ ಅಗತ್ಯತೆ ಹಾಗೂ ವೆಚ್ಚದ ಕುರಿತು ಸಮಗ್ರವಾಗಿ ಚರ್ಚಿಸಲಾಗಿ ತಗುಲುವ ವೆಚ್ಚವನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಭರಿಸಲು ಹಾಗೂ ಸದರಿ ಕಾಮಗಾರಿಯನ್ನು ಕೈಗೊಳ್ಳಲು 4ಜಿ ವಿನಾಯಿತಿ ಇರುವ ಸಂಸ್ಥೆಗೆ ನೀಡಲು ಸಭೆಯು ಅನುಮೋದಿಸಿತು.

**ವಿಷಯಕ್ರಮಾಂಕ (9.8)**

ಡಾ. ಸಂಜಯ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ಬಿ.ಆರ್.ಬಿ. ಕಾಲೇಜು ಇವರಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಗುರುತಿಸುವ ಕುರಿತು.

**ನಿರ್ಣಯ**

ವಿಶ್ವವಿದ್ಯಾನಿಲಯದ ಮೂರು ಡೀನರನ್ನು ಒಳಗೊಂಡ ಸಮಿತಿಯನ್ನು ರಚಿಸಿ ವರದಿಯನ್ನು ಪಡೆಯಲು ಸಭೆಯು ತೀರ್ಮಾನಿಸಿತು.

**ವಿಷಯಕ್ರಮಾಂಕ (9.9)**

ಮಾನ್ಯ ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಇವರು ಎರಡು ವಿಷಯಗಳ ಕುರಿತು ಚರ್ಚಿಸಲು ಸಭಾಧ್ಯಕ್ಷರ ಅನುಮತಿಯನ್ನು ಕೇಳಿದರು ಅದಕ್ಕೆ ಮಾನ್ಯ ಕುಲಪತಿಯವರು ಒಪ್ಪಿಗೆಯನ್ನು ಸೂಚಿಸಿದರು.

ಅ)

24 ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಕುರಿತು

**ಚರ್ಚೆ**

24 ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪ್ರಸ್ತುತಯಾವ ಹಂತದಲ್ಲಿದೆಎಂದುಶ್ರೀ ಜೀಶಾನ್ಇವರು ಸಭೆಗೆಕೇಳಿದಾಗ, ಕುಲಸಚಿವರು ಸದರಿ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮಾನ್ಯಕರ್ನಾಟಕಉಚ್ಚನ್ಯಾಯಲಯ, ಕಲಬುರಗಿ ಪೀಠವುರಿಟ್ ಪಿಟಿಷನ್ ಸಂಖ್ಯೆ 201865/2026 ರಡಿ ಸರ್ಕಾರದಆದೇಶ ಸಂಖ್ಯೆ: ಇಡಿ 31 ಯುಜಿವಿ 2024, ದಿನಾಂಕ: 16.04.2026 ಕ್ಕೆ ತಡೆಯಾಜ್ಞೆ ನೀಡಿರುವುದರಿಂದಎಲ್ಲಾ ವಿಭಾಗಗಳ ಸಂದರ್ಶನಗಳನ್ನು ಮಂದೂಡಲಾಗಿದೆ. ಕಾರಣ, ವಿಚಾರಣೆ ನ್ಯಾಯಾಲಯದ ಹಂತದಲ್ಲಿರುವುದರಿಂದ ಸದರಿತಡೆಯಾಜ್ಞೆ ತೆರವುಗೊಳ್ಳುವವರೆಗೆ ಯಾವುದೇ ಕ್ರಮಗೊಳ್ಳಲಾಗುವುದಿಲ್ಲ ಎಂದು ಸಭೆಗೆ ತಿಳಿಸಿದರು. ಮುಂದುವರೆದು, ಸದರಿತಡೆಯಾಜ್ಞೆ ತೆರವುಗೊಳಿಸುವ ಸಂಬಂಧ ಸರ್ಕಾರದ ಹಂತದಲ್ಲಿ ಪತ್ರ ವ್ಯವಹಾರಗಳನ್ನು ನಡೆಸಲಾಗುತ್ತಿದ್ದು ವಿಶ್ವವಿದ್ಯಾನಿಲಯದ ಪರವಾಗಿ ಸರ್ಕಾರಿ ವಕೀಲರಿಗೆಆಕ್ಷೇಪಣಾ ಹೇಳಿಕೆಗಳನ್ನು ಅಂತಿಮಗೊಳಿಸಲು ಕ್ರಮವಹಿಸಲಾಗುತ್ತಿದೆಎಂದು ಸಭೆಗೆ ತಿಳಿಸಿದರು.

**ನಿರ್ಣಯ**

ಮಾನ್ಯಕರ್ನಾಟಕಉಚ್ಚನ್ಯಾಯಲಯದ ಮುಂದಿನ ಆದೇಶದ ವರೆಗೆ ಹಾಗೂ ಸರ್ಕಾರದ ನಿರ್ದೇಶನ ಬಂದ ನಂತರ ಸದರಿ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲುಕ್ರಮ ವಹಿಸಲು ಸಭೆಯು ನಿರ್ಧರಿಸಿತು.

(ಬ)

ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಬೋಧಕೇತರ ಸಿಬ್ಬಂದಿಗಳ ಮುಂಬಡ್ತಿಯ ಕುರಿತು.

**ಚರ್ಚೆ**

ದಿನಾಂಕ 07.01.2026 ರಂದು ಜರುಗಿದ ಸಿಂಡಿಕೇಟ್ ಸಭೆಯ ವಿಷಯ ಕ್ರಮಾಂಕ 10 ರ ಉಪ ಕ್ರಮಾಂಕ 05 ರಲ್ಲಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಬೋಧಕೇತರ ಸಿಬ್ಬಂದಿಗಳ ಮುಂಬಡ್ತಿಯ ಕುರಿತು ನಿರ್ಣಯದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆಯನ್ನು ನೀಡಲಾಗಿತ್ತು. ಸದರಿ ಮುಂಬಡ್ತಿಯ ವಿಷಯ ಯಾವ ಹಂತದಲ್ಲಿರುತ್ತದೆ ಎಂದು ಕೇಳಿದರು ಇದಕ್ಕೆ ಉತ್ತರವಾಗಿ ಮಾನ್ಯ ಕುಲಸಚಿವರು ಈಗಾಗಲೇ ವಿಶ್ವವಿದ್ಯಾನಿಲಯದ ಖಾಯಂ ಬೋಧಕೇತರ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಯನ್ನು ತಯಾರಿಸಲಾಗಿದ್ದು ಮುಂದಿನ ಹಂತವಾಗಿ ವಿಭಾಗ ಪದೋನ್ನತಿ ಸಮಿತಿಯನ್ನು (DPC) ರಚಿಸಬೇಕಾಗಿರುತ್ತದೆ ಎಂದು ತಿಳಿಸುತ್ತಾ ಸದರಿ ಸಮಿತಿಯನ್ನು ರಚಿಸಿ ಬೋಧಕೇತರ ಸಿಬ್ಬಂದಿಗಳ ಮುಂಬಡ್ತಿ ನೀಡಲಾಗುವುದು ಎಂದು ಸಭೆಗೆ ತಿಳಿಸಿದರು. ಇದಕ್ಕೆ ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಇವರು ಮುಂಬರುವ ಸಿಂಡಿಕೇಟ್ ಸಭೆಯ ಒಳಗಾಗಿ ಮುಂಬಡ್ತಿಯನ್ನು ನೀಡಿ ಆದೇಶವನ್ನು ಹೊರಡಿಸುವ ಸಂಬಂದ ಸೂಕ್ತ ನಿರ್ದೇಶನವನ್ನು ಹೊರಡಿಸಲು ಮಾನ್ಯ ಕುಲಪತಿಗಳಿಗೆ ಕೋರಿದರು

**ನಿರ್ಣಯ**

ಸದರಿ ವಿಷಯಕ್ಕೆ ಎಲ್ಲಾ ಸಿಂಡಿಕೇಟ್ ಸದಸ್ಯರು ಒಮ್ಮತದಿಂದ ಒಪ್ಪಿಗೆಯನ್ನು ಸೂಚಿಸಿ ಬೋಧಕೇತರ ಸಿಬ್ಬಂದಿಗಳ ಮುಂಬಡ್ತಿಯನ್ನು ನೀಡಲು ಆದಷ್ಟು ಬೇಗ ಕ್ರಮ ಕೈಗೊಳ್ಳಲು ಅನುಮೋಧಿಸಲಾಯಿತು.

ಕುಲಸಚಿವರು ಮಾನ್ಯ ಕುಲಪತಿಗಳಿಗೆ, ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳಿಗೆ ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

11/8/26

**ಡಾ. ಚನ್ನಪ್ಪ ಎ., ಕೆ.ಎ.ಎಸ್**
**ಕುಲಸಚಿವರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು**

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

11/8/26

**ಪ್ರೊ. ಶಿವಾನಂದ ಕೆಳಗಿನಮನಿ**
**ಕುಲಪತಿಗಳು**
**ಹಾಗೂ ಸಿಂಡಿಕೇಟ್ ಸಭೆಯ ಅಧ್ಯಕ್ಷರು**

ಕುಲಪತಿಗಳು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು